**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**ಸಿ. ಸಿ. ನಂ. 565/2023**

**ಪಿರ್ಯಾಧಿದಾರರುಃ** ಶ್ರೀ ಚಂದ್ರಶೇಖರ್ ಬಿನ್ ಬಾಬು ಆಚಾರ್, 45 ವರ್ಷ, ಗಣೇಶ್ ಟ್ರೇಡರ್, ಜಯಪುರ, ಜಯಪುರ ಗ್ರಾಮ ಮತ್ತು ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

-**ವಿರುದ್ಧ** -

**ಆರೋಪಿಃ** ಶ್ರೀ ಕೀರ್ತಿರಾಜ್ ಎಸ್. ಬಿನ್ ಶಂಕರ ನಾರಾಯಣ, 36 ವರ್ಷ,ವಾಸ ಬೈಲ್ ಕೊಪ್ಪ, ಕೂಳೂರು ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಆರೋಪಣೆ**

ಆರೋಪಿಯಾದ ನೀವು ನಿಮ್ಮ ತುರ್ತು ಅವಶ್ಯಕತೆಗಾಗಿ ಪಿರ್ಯಾಧಿದಾರರಿಂದ 2023 ನೇ ಇಸವಿ ಮಾರ್ಚ್ ತಿಂಗಳ ಮೊದನೇ ವಾರ ರಂದು ರೂ. 55,000/- ಗಳ ಕೈ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ನೀವು ನಿಮ್ಮ ಬಾಬ್ತು ಅವರಿಗೆ ಚೆಕ್ ನಂ. 177751, ದಿನಾಂಕ 04.04.2023 ನ್ನು ನಮೂದಿಸಿದ ಕರ್ನಾಟಕ ಬ್ಯಾಂಕ್, ಜಯಪುರ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಸದರಿ ಚೆಕ್ಕನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್, ಜಯಪುರ ಶಾಖೆಗೆ ಹಾಜರುಪಸಿದಾಗ "Funds insufficient'' ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 30.06.2023 ರಂತೆ ವಕೀಲರ ನೋಟೀಸು ನೀಡಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 02.07.2023 ರಂದು ನಿಮಗೆ ಜಾರಿಯಾಗಿದ್ದು, ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ. ತಿಳಿಯಿತು.

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕಃ 17.06.2025.

ಸಹಿ/- 17.06.2025.
(ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,
ಕೊಪ್ಪ